**ಸಾಕ್ಷಿಗೆ ದಿನಾಂಕ: 25.09.2023 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ RDB ರವರಿಂದ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾವು ಒಟ್ಟು 6 ಜನ ಅಣ್ಣತಮ್ಮಂದಿರು. ನಾವು ಅಣ್ಣತಮ್ಮಂದಿರು ಈಗ ಬೇರೆ ಬೇರೆ ಆಗಿರುತ್ತೇವೆ ಅದರೆ ಯಾವಾಗ ಬೇರೆ ಆಗಿರುತ್ತೇವೆ ಎಂದು ನನಗೆ ಹೇಳಲು ಈಗ ನೆನಪಿಲ್ಲ. ನನ್ನ ಮತ್ತು ಅಣ್ಣತಮ್ಮಂದಿರ ನಡುವೆ ಆಸ್ತಿ ಹಂಚಿಕೆಯಾದ ಸಮಯದಲ್ಲಿ ನನಗೆ ಹಣ ಮತ್ತು ಹಳೆಯ ಮನೆಯಲ್ಲಿ ಸ್ವಲ್ಪ ಭಾಗವನ್ನು ನನ್ನ ಹಿಸ್ಸೆಗೆ ನೀಡಿರುತ್ತಾರೆ. ಹೀಗೆ ಹಂಚಿಕೆಯಾದ ಸಮಯದಲ್ಲಿ ನನಗೆ ಹಾಗೂ ನನ್ನ ಅಣ್ಣತಮ್ಮಂದಿರಿಗೆ ತಲಾ ರೂ.50,000/- ಕ್ಕಿಂತ ಹೆಚ್ಚಿಗೆ ಹಣ ಹಂಚಿಕೆ ಮಾಡಿಕೊಂಡಿರುತ್ತೇವೆ. ಹೀಗೆ ಹಂಚಿಕೆಯಾದ ಹಣ ಹಾಗೂ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಕಾಗದ ಪತ್ರ ಆಗಿರುವುದಿಲ್ಲ ಆದರೆ ಹಿರಿಯರ ಸಮಕ್ಷಮ ಹಂಚಿಕೆ ಮಾಡಿಕೊಂಡಿರುತ್ತೇವೆ.

ನನಗೆ 4 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಹೀಗೆ ಒಟ್ಟು 7 ಜನ ಮಕ್ಕಳು. 7 ಜನ ಮಕ್ಕಳ ಶಿಕ್ಷಣ ಆಗಿರುತ್ತದೆ. ನಮ್ಮ ಮನೆತನಕ್ಕೆ ವ್ಯಾಪಾರವೇ ಆದಾಯದ ಮೂಲ ಎಂದರೆ ನಿಜ. ನನ್ನದು ಹಾಗೂ ನಮ್ಮ ಅಣ್ಣತಮ್ಮಂದಿರ ಅಂಗಡಿ ಮುಗ್ಗಟ್ಟುಗಳು ಕಿತ್ತೂರಿನ ಸೋಮವಾರ ಪೇಟೆಯಲ್ಲಿಯೇ ಇರುತ್ತವೆ ಎಂದರೆ ನಿಜ. ನನ್ನ 3 ಜನ ಹೆಣ್ಣು ಮಕ್ಕಳ ಮದುವೆಯನ್ನು ನಾನೇ ಸ್ವತಃ ಖರ್ಚು ಮಾಡಿ ಮದುವೆ ಮಾಡಿ ಕೊಟ್ಟಿರುತ್ತೇನೆ.

ಈ ದಾವೆಯಲ್ಲಿ ಎರಡು ದಾವಾ ಆಸ್ತಿಗಳು ಇರುತ್ತವೆ ಆದರೆ ಅವುಗಳ ನಂಬರ ನನಗೆ ಈಗ ನೆನಪಿಲ್ಲ. ದಾವಾ ಆಸ್ತಿಗಳು ಕಿತ್ತೂರಿನ ಗುರುವಾರ ಪೇಟೆಯಲ್ಲಿರುತ್ತವೆ. ದಾವಾ ಆಸ್ತಿ ನಂ. 953 ಇದು ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಹಿರಿಯರ ಕಾಲದಿಂದ ದುಡಿದು ಸಂಪಾದನೆ ಮಾಡಿರುವ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಸಧ್ಯ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಒಂದು ಆಸ್ತಿಯಲ್ಲಿ ಪ್ರತಿವಾದಿಯ ಹೆಸರು ಹಾಗೂ ಇನ್ನೊಂದು ಆಸ್ತಿಯಲ್ಲಿ ನನ್ನ ಹೆಸರು ಇದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಎರಡು ಆಸ್ತಿಗಳು ನನ್ನ ಹೆಸರಿನಲ್ಲಿಯೇ ಇದ್ದವು ಅದರೆ ಒಂದು ಆಸ್ತಿಯನ್ನು ಪ್ರತಿವಾದಿಯ ಹೆಸರಿಗೆ ನಾನೇ ಮಾಡಿರುತ್ತೇನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ವರ್ಗಾವಣೆ ಮಾಡಲು ನಾನು ಪಂಚಾಯತಿಗೆ ಯಾವಾಗ ಆರ್ಜಿ ನೀಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ 1 ನೇ ಪ್ರತಿವಾದಿ ಒತ್ತಾಯಪೂರ್ವಕವಾಗಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಬಗ್ಗೆ ನನಗೆ ಸುಮಾರು 5 ವರ್ಷಗಳ ಹಿಂದೆ ಜನರು ಬಂದು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಮಾರಾಟಕ್ಕೆ ಇಟ್ಟಿರುತ್ತಾರೆ ಎಂದು ಹೇಳಿದಾಗ ನಂತರ ನಾನು ವಿಚಾರಣೆ ಮಾಡಿದಾಗ ನನಗೆ ತಿಳಿದಿರುತ್ತದೆ ಎಂದು ಹೇಳುತ್ತಾರೆ.

ದಾವಾ ಆಸ್ತಿ ನಂ. 953 ಇದು ಮೊದಲಿಗೆ ನನ್ನ ಹೆಸರಿಗೆ ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯ 1982-83 ಇರಬಹುದು ಆದರೆ ನಿಖರವಾಗಿ

ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ನಾನು ಖರೀದಿ ಮಾಡಿದ ನಂತರ ಸದರಿ ಆಸ್ತಿಯಲ್ಲಿರುವ ಮನೆಯನ್ನು ರೀಪೇರಿ ಮಾಡಿಸಿರುತ್ತೇನೆ, ಆದರೆ ಎಷ್ಟು ಖರ್ಚು ಬಂದಿರುತ್ತವೆ ಎಂದು ನನಗೆ ಈಗ ನೆನಪಿರುವುದಿಲ್ಲ. ಸದರಿ ಮನೆಯ ರೀಪೇರಿ ಮಾಡಿಸಲು ಸಾಲವನ್ನು ಮಾಡಿರುತ್ತೇನೆ ಆದರೆ ಸದರಿ ಸಾಲವನ್ನು ಮರುಪಾವತಿಯನ್ನು ಮಾಡಿರುತ್ತೇನೆ. ಸದರಿ ಮನೆಯ ರೀಪೇರಿ ಸಲುವಾಗಿ ಇನ್ಸೂರೇನ್ಸ ಕಂಪನಿಯಲ್ಲಿ ಸಾಲವನ್ನು ತೆಗೆಯಿಸಿರುತ್ತೇನೆ ಎಂದರೆ ನಿಜ. ಸದರಿ ಕಂಪನಿಯಲ್ಲಿ ಎಷ್ಟು ಸಾಲ ಇತ್ತು ಎಂದೆರ ಸಾಕ್ಷಿಯು ಸುಮಾರು 50-60 ಸಾವಿರ ರೂಪಾಯಿಗಳ ಸಾಲ ಇರಬಹುದು.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಲಾಯಿತು.**

( ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**